**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.6/2019**

| | | |
|---|---|---|
| ಸಾಕ್ಷಿದಾರರ ಹೆಸರುಃ | **ಚನ್ನಯ್ಯ** | ಸಿ ಡಬ್ಲ್ಯೂ: 1 |
| ತಂದೆಯ ಹೆಸರುಃ | ನಂಜೇಗೌಡ | ಪಿ ಡಬ್ಲ್ಯೂ: 1 |
| ವಯಸ್ಸುಃ | 75 ವರ್ಷ | |
| ಉದ್ಯೋಗಃ | ವ್ಯವಸಾಯ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ತುರಗನೂರು | **16.11.2021** |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ಸುಮಾರು 3 ವರ್ಷಗಳ ಹಿಂದೆ **ಬೆಳಿಗ್ಗೆ 10.30** ರ ಸಮಯದಲ್ಲಿ ನಮ್ಮ ಮನೆಯ ಹತ್ತಿರ ಆರೋಪಿಗಳು ಬಂದು ಇದು ನಮ್ಮ ಜಾಗ ಎಂದು ನನಗೆ ಹೊಡೆಯಲು ಬಂದರು. ಆರೋಪಿಗಳು ನನಗೆ ಅವಾಚ್ಯ ಶಬ್ಧಗಳಿಂದ ಬೈದರು. ನಾನು ಈ ವಿಚಾರವಾಗಿ ಪೊಲೀಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು **ನಿಪಿ-**1 ಎಂದು ಸಾಕ್ಷಿಯ ಸಹಿಯನ್ನು **ನಿಪಿ-1 ಎ** ಎಂದು ಗುರುತಿಸಲಾಯಿತು.

ನಾನು ದೂರು ಕೊಟ್ಟ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರ್ ಮಾಡಿದರು. ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ **ಸ್ಥಳ ಮಹಜರ್** ಆಗಿದ್ದು, ಅದನ್ನು **ನಿಪಿ-2** ಎಂದು ಸಾಕ್ಷಿಯ ಸಹಿಯನ್ನು **ನಿಪಿ-2 ಎ** ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಸಂಜೆ **4.00** ರಿಂದ **4.45** ರವರೆಗೆ ಮಾಡಿದರು. ಪಂಚನಾಮೆಗೆ **ಕಿರಣ, ಸತೀಶ್** ಹಾಗೂ **ಸಿದ್ದೇಗೌಡ**ರವರು ಸಹಿ ಮಾಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿದಿದ್ದು, ಅನುಮತಿ ನೀಡಿದೆ.)

**ಪಾಟೀ ಸವಾಲುಃ** ಮಾನ್ಯ **ಎಪಿಪಿ** ರವರಿಂದಃ

ದಿನಾಂಕ **06.04.2018** ರಂದು ಗಲಾಟೆ ನಡೆಯಿತು ಎಂದರೆ ಸರಿ. 1 ಮತ್ತು 2 ನೇ ಆರೋಪಿಗಳು 3 ರಿಂದ 5 ನೇ ಆರೋಪಿಗಳಿಗೆ ನನ್ನನ್ನು ಹೊಡಿಯುವಂತೆ ಕುಮ್ಮಕ್ಕು ನೀಡಿದರು ಎಂದರೆ

ಸರಿ. ಆರೋಪಿಗಳು ನನ್ನ ನಿವೇಶನಕ್ಕೆ ಅಕ್ರಮ ಪ್ರವೇಶ ಮಾಡಿದರು ಎಂದರೆ ಸರಿ. **ಚಾಸಾ-2** ಮತ್ತು **ಚಾಸಾ-3** ಜಗಳ ಬಿಡಿಸಿದರು ಎಂದರೆ ಸರಿ.

ದಿನಾಂಕ **08.04.2018** ರಂದು ಪೊಲೀಸರು ಪಂಚನಾಮೆಗೆ ಬಂದಿದ್ದರು ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು 100/- ರೂ. ಖರ್ಚಿನೊಂದಿಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**